ಓ.ಎಸ್. ನಂ.313/2014ರಲ್ಲಿ
ಪಿ.ಡಬ್ಲ್ಯೂ-1(ವೆಂಕಟಲಕ್ಷ್ಮಮ್ಮ)

ದಿನಾಂಕ 14-10-2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ 19 ರಿಂದ 23ನೇ ರವರ ಪರ ಶ್ರೀ ಆರ ಎಸ್ ವಕೀಲರಿಂದಃ-

ಡಿ ಕೆಂಚಪ್ಪ ನನ್ನ ಅಣ್ಣ. ನಮ್ಮ ಊರಿನ ಮಾರಯ್ಯ ಅಲಿಯಾಸ್ ಕೆಂದಪ್ಪ ನನಗೆ ಗೊತ್ತು. ಅವರ ಮಗ ಮುನಿಯಪ್ಪ ಅಲಿಯಾಸ್ ಚಿಕ್ಕಮುನಿಯಪ್ಪ ಗೊತ್ತು. ಸದರಿ ಮುನಿಯಪ್ಪ ಮತ್ತು ನಾವು ಒಂದೇ ಜನಾಂಗದವರು ಅಂದರೆ ಸರಿ. ಮುನಿಯಪ್ಪ ಜೀವಂತ ಇಲ್ಲ ಅಂದರೆ ಸರಿ. ಪ್ರತಿವಾದಿ 19 ರವರು ಮುನಿಯಪ್ಪನವರ ಪತ್ನಿ, 20 ರಿಂದ 22 ಮುನಿಯಪ್ಪನ ಮಕ್ಕಳು ಅಂದರೆ ಸರಿ. ಪ್ರತಿವಾದಿ 19 ರಿಂದ 22 ನನಗೆ ಗೊತ್ತು. 1968ರಲ್ಲಿ ನನ್ನ ಅಣ್ಣ ಮತ್ತು ಸಹೋದರರು ವಿಭಾಗ ಮಾಡಿಕೊಂಡರು ಅಂದರೆ ಸರಿಯಲ್ಲ. ಈ ಕೇಸು ಹಾಕುವ ಕಾಲಕ್ಕೆ ನನ್ನ ಮೂರು ಜನ ಸಹೋದರರು ತೀರಿಕೊಂಡಿದ್ದರು ಅಂದರೆ ಸರಿ. ಅವರು ಬದುಕಿದ್ದಾಗ ಕೇಸು ಹಾಕಲು  ತೊಂದರೆ ಇತ್ತಾ ಅಂದರೆ ಸಾಕ್ಷಿ ಭಾಗ ಕೊಡುತ್ತೇವೆ ಎಂದು ಹೇಳುತ್ತಿದ್ದರು, ಅದಕ್ಕೆ ಹಾಕಿರಲಿಲ್ಲ ಎಂದು ನುಡಿಯುತ್ತಾರೆ. ನನ್ನ ಸಹೋದರರು 1968ರಲ್ಲೇ ವಿಭಾಗ ಮಾಡಿಕೊಂಡಿದ್ದು ಈ ವಿಚಾರ ಗೊತ್ತಿದ್ದರಿಂದ ನಾನು ದಾವೆ ಸಲ್ಲಿಸಿರಲಿಲ್ಲ ಅಂದರೆ ಸರಿಯಲ್ಲ. ಸ.ನಂ.74/1ರಲ್ಲಿ 25 ಗುಂಟೆ ನನ್ನ ಸಹೋದರ ಕೆಂಚಪ್ಪನ ಭಾಗಕ್ಕೆ ಹೋಗಿತ್ತು ಅಂದರೆ ಸರಿಯಲ್ಲ. ಕೆಂಚಪ್ಪನ ಹೆಸರಿಗೆ ಅದು ಖಾತೆ ಸಹ ಆಗಿತ್ತು ಅಂದರೆ ಸರಿಯಲ್ಲ. ನನ್ನ ಸಹೋದರ ಕೆಂಚಪ್ಪ ಕುಟುಂಬದ ಅವಶ್ಯಕತೆಗಾಗಿ ಬಿಡದಿಯ ಕೆನರಾ ಬ್ಯಾಂಕ್ ನಲ್ಲಿ 1979ರಲ್ಲಿ ಸಾಲ ಮಾಡಿದ್ದರು ಅಂದರೆ ಸರಿಯಲ್ಲ. ಸದರಿ ಸಾಲ ತೀರಿಸುವ ಸಲುವಾಗಿ ನನ್ನ ಸಹೋದರ ಕೆಂಚಪ್ಪ ಮುನಿಯಪ್ಪನವರಿಗೆ ರೂ.2000ಕ್ಕೆ ದಿನಾಂಕಃ22.11.1979ರಲ್ಲಿ ಮಾರಾಟ ಮಾಡಿದ್ದಾರೆಂದರೆ ಸರಿಯಲ್ಲ. ಕ್ರಯಪತ್ರ ನೋಂದಾಯಿಸಿ ಸ್ವಾಧೀನವನ್ನು ಸಹ ಮುನಿಯಪ್ಪನವರಿಗೆ ಕೊಟ್ಟಿದ್ದಾರೆಂದರೆ ಸರಿಯಲ್ಲ. ಕ್ರಯಪತ್ರ ಆದಾಗಿನಿಂದ 258ಗುಂಟೆಯಲ್ಲಿ ಮುನಿಯಪ್ಪನವರೇ ಸ್ವಾ ಧೀನದಲ್ಲಿದ್ದು ಖಾತೆ ಅವರ ಹೆಸರಿಗೆ ಆಗಿದೆ ಅಂದರೆ ಸರಿಯಲ್ಲ.

ಮುನಿಯಪ್ಪನ ಮರಣ ನಂತರ ಸದರಿ 25 ಗುಂಟೆಯಲ್ಲಿ ಪ್ರತಿವಾದಿ 19 ರಿಂದ 23 ರವರೇ ಸ್ವಾಧೀನದಲ್ಲಿದ್ದಾರೆಂದರೆ ಸರಿಯಲ್ಲ. ಸದರಿ 25 ಗುಂಟೆಯಲ್ಲಿ ನನಗೆ ಯಾವುದೇ ಹಕ್ಕು ಇಲ್ಲ, ಸುಳ್ಳು ದಾವೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ನಾವು ಸಹ ಜಂಟಿ ಸ್ವಾ ಧೀನದಲ್ಲಿ ಇಲ್ಲ ಅಂದರೆ ಸರಿಯಲ್ಲ. ಉದ್ದೇಶಪೂರ್ವಕವಾಗಿ ಪ್ರತಿವಾದಿ 19 ರಿಂದ 23 ರವರನ್ನು ಪಾಟಿಯಾಗಿ ಮಾಡಲಿಲ್ಲ ಅಂದರೆ ಸಾಕ್ಷಿ ಆಸ್ತಿ ನಮ್ಮ ತಂದೆಯ ಹೆಸರಿನಲ್ಲಿದೆ ಎಂದು ನುಡಿಯುತ್ತಾರೆ. 25ಗುಂಟೆಯಲ್ಲಿ ಪ್ರತಿವಾದಿ 19 ರಿಂದ 23 ರವರೇ ಸ್ವಾಧೀನದಲ್ಲಿದ್ದಾರೆಂದರೆ

ಸರಿಯಲ್ಲ. ನಾನು ನನ್ನ ಸಹೋದರರ ಪತ್ನಿ ಮಕ್ಕಳೊಂದಿಗೆ ಶಾಮೀಲಾಗಿ ಸುಳ್ಳು ದಾವೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ. 25ಗುಂಟೆಯಲ್ಲಿ ನಾವು ಯಾರೂ ಸ್ವಾ ಧೀನದಲ್ಲಿ ಇಲ್ಲ ಅಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.